ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 31-12-2001

# *ಈ ಹೊಸ ವರ್ಷದಲ್ಲಿ ಸಫಲತಾ ಭವದ ವರದಾನದ ಮೂಲಕ ತಂದೆ ಮತ್ತು ಸ್ವಯಂನ ಪ್ರತ್ಯಕ್ಷತೆಯನ್ನು ಸಮೀಪ ತೆಗೆದುಕೊಂಡು ಬನ್ನಿ*

(इस नये वर्ष में सफलता भव के वरदान द्वारा बाप और स्वयं की प्रत्यक्षता को समीप लाओ)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಈ ದಿನ ಹೊಸ ಯುಗದ ರಚಯಿತ ತಮ್ಮ ಮಾಸ್ಟರ್ ನವಯುಗದ ರಚನೆಕಾರ ಮಕ್ಕಳೊಂದಿಗೆ ಹೊಸ ವರ್ಷವನ್ನು ಆಚರಣೆ ಮಾಡುವ ಸಲುವಾಗಿ ಬಂದಿದ್ದಾರೆ. ಹೊಸ ವರ್ಷವನ್ನು ವಿಶ್ವದಲ್ಲಿ ಎಲ್ಲರೂ ಆಚರಿಸುತ್ತಾರೆ. ಆದರೆ ನೀವೆಲ್ಲರೂ ನವಯುಗವನ್ನು ರಚನೆ ಮಾಡುತ್ತಾ ಇದ್ದೀರಿ. ನವಯುಗದ ಖುಷಿಯು ಪ್ರತಿಯೊಬ್ಬ ಮಕ್ಕಳ ಆಂತರ್ಯದಲ್ಲಿಯೂ ಇದೆ. ನವಯುಗವು ಇನ್ನೇನು ಬಂದುಬಿಡುತ್ತದೆ ಎನ್ನುವುದನ್ನು ನೀವು ಮಕ್ಕಳು ತಿಳಿದುಕೊಂಡಿದ್ದೀರಿ. ಪ್ರಪಂಚದ ಮನುಷ್ಯರು ಹೊಸ ವರ್ಷವನ್ನು ಒಂದು ದಿನ ಮಾತ್ರ ಆಚರಣೆ ಮಾಡುತ್ತಾರೆ. ಆದರೆ ನೀವೆಲ್ಲರೂ ನವಯುಗವನ್ನು ಪೂರ್ತಿ ಸಂಗಮಯುಗದಲ್ಲಿ ಮಾಡಬೇಕಾಗಿದೆ. ಜನರು ಹೊಸ ವರ್ಷದಲ್ಲಿ ಕೇವಲ ಒಂದು ದಿನ ಆನಂದೋತ್ಸವನ್ನು ಆಚರಣೆ ಮಾಡುತ್ತಾ ಒಬ್ಬರಿಗೊಬ್ಬರು ಉಡುಗೊರೆಯನ್ನು (ಗಿಫ್ಟ್) ಕೊಡುತ್ತಾರೆ. ಮತ್ತೆ ಉಡುಗೊರೆಯೂ ಸಹ ಏನಾಗಿದೆ? ಅದು ಅಲ್ಪಕಾಲದ ಉಡುಗೊರೆಯಾಗಿದೆ. ನವಯುಗದ ರಚಯಿತ ತಂದೆಯು ಎಲ್ಲಾ ಮಕ್ಕಳಿಗೋಸ್ಕರ ಯಾವ ಉಡುಗೊರೆಯನ್ನು ತರುತ್ತಾರೆ? ಚಿನ್ನದ ಉಡುಗೊರೆಯನ್ನು ತರುತ್ತಾರೆ. ಆ ಚಿನ್ನದ ಉಡುಗೊರೆ ಅರ್ಥಾತ್ ಸ್ವರ್ಣಯುಗದಲ್ಲಿ ಎಲ್ಲರೂ ಸ್ವತಃವಾಗಿ ಬಂಗಾರವಾಗಿ ಬಿಡುತ್ತಾರೆ. ನವಮಾನವರಾಗಿ

ಬಿಡುತ್ತಾರೆ. ಇನ್ನು ಸ್ವಲ್ಪ ಸಮಯದ ನಂತರ ಹೊಸ ವರ್ಷವು ಆರಂಭವಾಗುತ್ತದೆ. ಆದರೆ ಎಲ್ಲವೂ ಹೊಸದಾಗುವುದಿಲ್ಲ. ನಿಮ್ಮ ನವಯುಗದಲ್ಲಿ ಪ್ರಕೃತಿಯೂ ಸಹ ಹೊಸದಾಗಿಬಿಡುತ್ತದೆ. ಆತ್ಮವೂ ಸಹ ಹೊಸ ವಸ್ತ್ರ(ಶರೀರ)ವನ್ನು ಧಾರಣೆ ಮಾಡುವುದು. ಪ್ರತಿಯೊಂದು ವಸ್ತುವು ಹೊಸದು ಅರ್ಥಾತ್ ಸತೋಪ್ರಧಾನ, ಸ್ವರ್ಣತುಲ್ಯವಾಗಿರುತ್ತದೆ. ಆದ್ದರಿಂದ ಹೊಸ ವರ್ಷವನ್ನು ಆಚರಣೆ ಮಾಡುತ್ತಾ ನಿಮ್ಮೆಲ್ಲರ ಮನಸ್ಸಿನಲ್ಲಿ, ಬುದ್ಧಿಯಲ್ಲಿ ನವಯುಗವೇ ನೆನಪಿಗೆ ಬರುತ್ತಾ ಇದೆ. ನವಯುಗವು ನೆನಪಿದೆಯಲ್ಲವೇ, ಅಥವಾ ಈ ದಿನದ ಹೊಸ ವರ್ಷವು ನೆನಪಿದೆಯೋ?

ಬಾಪ್‌ದಾದಾರವರು ಮೊದಲು ನವಯುಗದ ಶುಭಾಷಯಗಳನ್ನು ಕೊಡುತ್ತಾರೆ, ನಂತರ ಜೊತೆಯಲ್ಲಿ ಹೊಸ ವರ್ಷದ ಶುಭಾಶಯಗಳನ್ನು ಕೊಡುತ್ತಾರೆ. ಏಕೆಂದರೆ ನೀವೆಲ್ಲರೂ ಹೊಸ ವರ್ಷವನ್ನು ಆಚರಣೆ ಮಾಡಲು ಬಂದಿದ್ದೀರಲ್ಲವೇ! ಆಚರಣೆ ಮಾಡಿರಿ, ಚೆನ್ನಾಗಿ ಆಚರಣೆ ಮಾಡಿರಿ. ಬಾಪ್‌ದಾದಾರವರ ಮುಖಾಂತರ ಸಿಕ್ಕಿರುವ ಅವಿನಾಶಿ ಉಡುಗೊರೆಯ ಅವಿನಾಶಿ ಶುಭಾಶಯಗಳನ್ನು ಕೊಡಿ. ಇದೇ ಸತ್ಯವಾದ ಶುಭಾಶಯವಾಗಿದೆ. ಶುಭಾಶಯಗಳನ್ನು ಯಾವಾಗ ಕೊಡುತ್ತೀರೋ ಆಗ ಸ್ವಯಂ ನೀವೂ ಸಹ ಖುಷಿಯಾಗುತ್ತೀರಿ ಹಾಗೂ ಅನ್ಯರೂ - ಖುಷಿಯಾಗುತ್ತಾರಲ್ಲವೇ! ಆದ್ದರಿಂದ ಸತ್ಯವಾದ ಹೃದಯದ ಶುಭಾಶಯವು ಒಬ್ಬರಿಗೊಬ್ಬರು ಮನಃಪೂರ್ವಕವಾಗಿ ಕೊಡುವ ಶುಭಭಾವನೆ, ಶುಭಕಾಮನೆಯ ಶುಭಾಶಯವಾಗಿದೆ. ಶುಭಭಾವನೆಯು ಎಂತಹ ಶ್ರೇಷ್ಠ ಶುಭಾಶಯವಾಗಿದೆ ಎಂದರೆ ಯಾವುದೇ ಆತ್ಮದ ಎಂತಹದೇ ಭಾವನೆಯು ಇದ್ದರೂ ಒಳ್ಳೆಯ ಭಾವನೆ ಮತ್ತು ಒಳ್ಳೆಯ ಭಾವ ಇಲ್ಲದಿದ್ದರೂ, ನಿಮ್ಮ ಶುಭಭಾವನೆಯು ಅವರ ಭಾವವನ್ನೂ ಸಹ ಪರಿವರ್ತನೆ ಮಾಡಬಲ್ಲದು. ಸ್ವಭಾವವನ್ನೂ ಸಹ ಪರಿವರ್ತನೆ ಮಾಡಲು ಸಾಧ್ಯವಿದೆ. ವಾಸ್ತವವಾಗಿ ಸ್ವಭಾವ ಎಂಬ ಶಬ್ದದ ಅರ್ಥವೇ ಸ್ವ ಅರ್ಥಾತ್ ಶುಭಭಾವ, ಪ್ರತಿಯೊಂದು ಸಮಯದಲ್ಲಿಯೂ ಪ್ರತಿಯೊಂದು ಆತ್ಮಕ್ಕೂ ಇದೇ ಅವಿನಾಶೀ ಶುಭಾಶಯವನ್ನು ಕೊಡುತ್ತಾ ಹೋಗಿ. ಯಾರಾದರೂ ನಿಮಗೆ ಏನೇ ಕೊಟ್ಟರೂ ನೀವು ಎಲ್ಲರಿಗೂ ಶುಭಭಾವನೆಯನ್ನೇ ಕೊಡಿ. ಅವಿನಾಶಿ ಆತ್ಮದ ಅವಿನಾಶೀ ಆತ್ಮಿಕ ಸ್ಥಿತಿಯಲ್ಲಿ ಸ್ಥಿತವಾಗುವುದರಿಂದ ಆತ್ಮದ ಪರಿವರ್ತನೆಯು ಆಗಿಯೇ ಆಗುತ್ತದೆ. ಆದ್ದರಿಂದ ಈ ಹೊಸ ವರ್ಷದಲ್ಲಿ ಏನು ಹೊಸ ವಿಶೇಷತೆಯನ್ನು ಮಾಡುವಿರಿ? ಸ್ವಯಂಲ್ಲಿಯೂ ಸರ್ವರಲ್ಲಿಯೂ ಹಾಗೂ ಸೇವೆಯಲ್ಲಿಯೂ ಯಾವ ವಿಶೇಷತೆಯನ್ನು ಮಾಡುವಿರಿ? ಹೊಸ ವರ್ಷ ಎನ್ನುವ ಹೆಸರು ಇರುವುದರಿಂದ ಏನಾದರೂ ನವೀನತೆಯನ್ನು ಮಾಡುತ್ತೀರಲ್ಲವೇ! ಅದರೆ ಏನು ನವೀನತೆಯನ್ನು ಮಾಡುತ್ತೀರಿ? ಪ್ರತಿಯೊಬ್ಬರೂ ನಿಮ್ಮ ನವೀನತೆಯ ಪ್ಲಾನನ್ನು ತಯಾರು ಮಾಡಿದ್ದೀರಾ? ಅಥವಾ ಈಗ ಕೇವಲ ಹೊಸ ವರ್ಷವನ್ನು ಆಚರಣೆ ಮಾಡುತ್ತೀರಾ? ಮಿಲನ ಮಾಡಿದಿರಿ, ಹೊಸ ವರ್ಷವನ್ನು ಆಚರಣೆ ಮಾಡಿದಿರಿ, ಅದರ ನವೀನತೆಯ ಯಾವ ಪ್ಲಾನನ್ನು ತಯಾರು ಮಾಡಿದ್ದೀರಿ?

ಬಾಪ್‌ದಾದಾರವರು ಪ್ರತಿಯೊಬ್ಬ ಮಗುವಿಗೂ ಈ ವರ್ಷದ ಸಲುವಾಗಿ ಯಾವ ವಿಶೇಷ ಅದೇಶವನ್ನು ಕೊಡುತ್ತಾರೆಂದರೆ ಸಮಯದ ಅನುಸಾರವಾಗಿ ಎಲ್ಲಾ ಮಕ್ಕಳೂ ಇಲ್ಲಿ ಸಾಕಾರದಲ್ಲಿ ಸಮ್ಮುಖದಲ್ಲಿಯಾದರೂ ಕುಳಿತಿರಲಿ ಅಥವಾ ದೇಶ-ವಿದೇಶಗಳಲ್ಲಿಯಾದರೂ ಇರಲಿ ವಿಜ್ಞಾನದ ಸಾಧನದ ಮುಖಾಂತರ ಮಹಾವಾಕ್ಯಗಳನ್ನು ಕೇಳುತ್ತಾ ಇದ್ದಾರೆ, ನೋಡುತ್ತಾ ಇದ್ದಾರೆ. ಬಾಪ್‌ದಾದಾರವರೂ ಸಹ ಎಲ್ಲರನ್ನೂ ನೋಡುತ್ತಾ ಇದ್ದಾರೆ. ತುಂಬಾ ಆರಾಮವಾಗಿ ಆನಂದದಿಂದ ನೋಡುತ್ತಾ ಇದ್ದಾರೆ. ಆದ್ದರಿಂದ ವಿಶ್ವದ ಸರ್ವ ಬಾಪ್‌ದಾದಾರವರ ಅತಿ ಪ್ರೀತಿಯ, ಅತಿ ಮಧುರ

ಮಕ್ಕಳಿಗೆ ಬಾಪ್‌ದಾದಾರವರು ಯಾವ ಆದೇಶ ನೀಡುತ್ತಾರೆಂದರೆ ಈಗ ನಿಮ್ಮ ಈ ಬ್ರಾಹ್ಮಣ ಜೀವನದಲ್ಲಿ ಅಮೃತವೇಳೆಯಿಂದ ಪ್ರಾರಂಭವಾಗಿ ರಾತ್ರಿಯವರೆಗೆ ಉಳಿತಾಯದ ಖಾತೆಯನ್ನು ಹೆಚ್ಚಿಸಿಕೊಳ್ಳಿ, ಜಮಾದ ಖಾತೆಯನ್ನು ವೃದ್ಧಿ ಮಾಡಿಕೊಳ್ಳಿ. ಪ್ರತಿಯೊಬ್ಬರೂ ನಿಮ್ಮ ಕಾರ್ಯದ ಅನುಸಾರವಾಗಿ ನಿಮ್ಮ ಪ್ಲಾನನ್ನು (ಯೋಜನೆಯನ್ನು) ತಯಾರು ಮಾಡಿಕೊಳ್ಳಿ. ಬ್ರಾಹ್ಮಣ ಜೀವನದಲ್ಲಿ ಏನೇನು ಖಜಾನೆಗಳು ಸಿಕ್ಕಿದೆಯೋ ಆ ಪ್ರತಿಯೊಂದು ಖಜಾನೆಯ ಉಳಿತಾಯ ಅಥವಾ ಜಮಾದ ಖಾತೆಯನ್ನು ಹೆಚ್ಚಿಸಿಕೊಳ್ಳಿ. ಏಕೆಂದರೆ ಬಾಪ್‌ದಾದಾರವರು ಈ ದಿನ ಅಂತ್ಯದವರೆಗು ನಾಲ್ಕೂ ಕಡೆಯ ಮಕ್ಕಳ ಫಲಿತಾಂಶವನ್ನು ನೋಡಿದ್ದಾರೆ. ಏನು ನೋಡಿದ್ದೆವು? ತಿಳಿದುಕೊಂಡು ಬಿಟ್ಟಿದ್ದೀರಿ, ಶಿಕ್ಷಕಿಯರೂ ಸಹ ತಿಳಿದುಕೊಂಡುಬಿಟ್ಟಿದ್ದಾರೆ. ಡಬಲ್ ವಿದೇಶಿಯರೂ ಸಹ ತಿಳಿದುಕೊಂಡು ಬಿಟ್ಟಿದ್ದಾರೆ, ಭಾರತೀಯರೂ ಸಹ ತಿಳಿದುಕೊಂಡು ಬಿಟ್ಟಿದ್ದಾರೆ. ಜಮಾದ ಖಾತೆಯು ಎಷ್ಟು ಇರಬೇಕೋ ಅಷ್ಟು...... ಏನು ಹೇಳಲಿ? ನೀವೇ ಸ್ವಯಂ ಹೇಳಿ, ಏಕೆಂದರೆ ಸರ್ವ ಖಜಾನೆಗಳನ್ನು ಜಮಾ ಮಾಡಿಕೊಳ್ಳುವ ಸಮಯವು ಕೇವಲ ಈಗಿನ ಸಂಗಮಯುಗವಾಗಿದೆ ಎನ್ನುವುದನ್ನು ಬಾಪ್‌ದಾದಾರವರು ತಿಳಿದುಕೊಂಡಿದ್ದಾರೆ. ಈ ಅತಿ ಚಿಕ್ಕ ಯುಗದಲ್ಲಿ ಎಷ್ಟು ಜಮಾ ಮಾಡಿಕೊಳ್ಳುತ್ತೀರೋ ಅದರ ಅನುಸಾರವಾಗಿಯೇ ಇಡೀ ಕಲ್ಪದ ಪ್ರಾಲಬ್ಧವನ್ನು ಪ್ರಾಪ್ತಿ ಮಾಡಿಕೊಳ್ಳುತ್ತಿರುತ್ತೀರಿ. ನಿಮ್ಮೆಲ್ಲರದ್ದೂ ಒಂದು ಸ್ಲೋಗನ್ ಇದೆಯಲ್ಲವೇ. ಅದು ಯಾವ ಸ್ಲೋಗನ್ ಆಗಿದೆ? ಈಗಲ್ಲದಿದ್ದರೆ ಇನ್ನೆಂದಿಗೂ ಇಲ್ಲ ಈ ಸ್ಲೋಗನ್ ಬುದ್ಧಿಯಲ್ಲಂತೂ ತುಂಬಾ ಇದೆ, ಆದರೆ ಮನಸ್ಸಿನಲ್ಲಿ ಈ ನೆನಪನ್ನು ಮರೆತುಹೋಗುತ್ತೀರಿ, ನೆನಪು ಇರುತ್ತದೆ. ಎಲ್ಲದಕ್ಕಿಂತಲೂ ಅತಿ ದೊಡ್ಡ ಖಜಾನೆಯು ಈ ಬ್ರಾಹ್ಮಣ ಜೀವನದ ಶ್ರೇಷ್ಠತೆಯ ಆಧಾರವೂ ಸಹ ಸಂಕಲ್ಪದ ಖಜಾನೆ, ಸಮಯದ ಖಜಾನೆ, ಶಕ್ತಿಯ ಖಜಾನೆ, ಜ್ಞಾನದ ಖಜಾನೆ ಆಗಿದೆ. ಆದರೆ ಸ್ಥೂಲ ಧನದ ಖಜಾನೆಯಂತೂ ಇದ್ದೇ ಇದೆ. ಆದ್ದರಿಂದ ಬಾಪ್‌ದಾದಾರವರು ಏನು ನೋಡಿದರೆಂದರೆ ನೀವು ಬ್ರಾಹ್ಮಣರು ಪ್ರತಿಯೊಬ್ಬರು ಎಷ್ಟು ಶ್ರೇಷ್ಠ ಸಂಕಲ್ಪದ ಖಜಾನೆಯ ಮುಖಾಂತರ ಸ್ವಯಂನ್ನು ಅಥವಾ ಸೇವೆಯನ್ನು ಶ್ರೇಷ್ಠರನ್ನಾಗಿ ಮಾಡಲು ಸಾಧ್ಯವಿದೆಯೋ ಅದರಲ್ಲಿ ಈಗ ಇನ್ನೂ ಬಹಳ ಗಮನ (ಅಂಡರ್ಲೈನ್ ಮಾಡಬೇಕಾಗಿದೆ) ಕೊಡಬೇಕಾಗಿದೆ.

ಬ್ರಾಹ್ಮಣರಾದ ನಿಮ್ಮ ಶ್ರೇಷ್ಠ ಸಂಕಲ್ಪದಲ್ಲಿ, ಶುಭ ಸಂಕಲ್ಪದಲ್ಲಿ ಎಷ್ಟು ಶಕ್ತಿ ಇದೆ ಎಂದರೆ ಆತ್ಮರಿಗೆ ಬಹಳ ಸಹಯೋಗವನ್ನು ಕೊಡಬಹುದು. ಸಂಕಲ್ಪ ಶಕ್ತಿಯ ಮಹತ್ವವನ್ನು ಈಗ ಇನ್ನೂ ಎಷ್ಟು ಹೆಚ್ಚಿಸಿಕೊಳ್ಳಲು ಬಯಸಿದರೆ ಅಷ್ಟೂ ಹೆಚ್ಚಿಸಿಕೊಳ್ಳಬಹುದು. ಹೇಗೆ ವಿಜ್ಞಾನದ ಸಾಧನವಾದ ರಾಕೆಟನ್ನು ದೂರದಲ್ಲಿ ಕುಳಿತುಕೊಂಡು ಎಲ್ಲಿ ಬೇಕಾದರೆ ಅಲ್ಲಿ, ಯಾವಾಗ ಬೇಕಾದರೆ ಆಗ, ಯಾವ ಸ್ಥಳಕ್ಕೆ ತಲುಪಲು ಬಯಸುತ್ತೀರೋ ಅಲ್ಲಿಗೆ ಒಂದು ಸೆಕೆಂಡಿನಲ್ಲಿ ತಲುಪಲು ಸಾಧ್ಯವಿದೆ. ನಿಮ್ಮ ಶುಭ ಶ್ರೇಷ್ಠ ಸಂಕಲ್ಪದ ಮುಂದೆ ಈ ರಾಕೆಟ್ ಏನಾಗಿದೆ? ಪರಿಷ್ಕೃತ ವಿಧಿಯಿಂದ ಕಾರ್ಯದಲ್ಲಿ ಪ್ರಯೋಗ ಮಾಡಿ ನೋಡಿರಿ. ನಿಮ್ಮ ವಿಧಿಯ ಸಿದ್ಧಿಯು ತುಂಬಾ ಶ್ರೇಷ್ಠವಾಗಿದೆ. ಆದರೆ ಈಗ ಅಂತರ್ಮುಖತೆಯ ಭಟ್ಟಿಯಲ್ಲಿ ಕುಳಿತುಕೊಳ್ಳಿರಿ. ಆದುದರಿಂದ ಈ ಹೊಸ ವರ್ಷದಲ್ಲಿ ನಿಮ್ಮ ಸರ್ವ ಖಜಾನೆಗಳ ಉಳಿತಾಯದ ಯೋಜನೆಯನ್ನು ನೀವೇ ತಯಾರು ಮಾಡಿಕೊಳ್ಳಿ. ಜಮಾದ ಖಾತೆಯನ್ನು ಹೆಚ್ಚಿಸಿಕೊಳ್ಳಿ. ಅಂತರ್ಮುಖತೆಯ ಭಟ್ಟಿಯನ್ನು ಇಡೀ ದಿನದಲ್ಲಿ ಸ್ವಯಂ ನೀವೇ ನಿಮ್ಮ ಸಲುವಾಗಿ ಸಮಯೋಚಿತವಾಗಿ ನಿಗದಿ ಮಾಡಿಕೊಳ್ಳಿ. ಸ್ವಯಂ ನೀವೇ ಮಾಡಿಕೊಳ್ಳಬಹುದು, ಬೇರೆಯವರು ನಿಗದಿ ಮಾಡಲು ಸಾಧ್ಯವಿಲ್ಲ.

ಬಾಪ್‌ದಾದಾರವರು ಪ್ರತ್ಯಕ್ಷತೆಯ ವರ್ಷಕ್ಕೆ ಮುಂಚೆ ಈ ವರ್ಷವನ್ನು ಸಫಲತಾ ಭವದ ವರ್ಷ ಎಂದು ಕರೆಯುತ್ತಾರೆ. ಸಫಲತೆಯ ಆಧಾರವು ಪ್ರತಿಯೊಂದು ಖಜಾನೆಯನ್ನು ಸಫಲ ಮಾಡಿಕೊಳ್ಳಬೇಕು. ಸಫಲ ಮಾಡಿಕೊಳ್ಳಿ, ಸಫಲತೆಯನ್ನು ಪ್ರಾಪ್ತಿ ಮಾಡಿಕೊಳ್ಳಿ. ಸಫಲತೆಯು ಪ್ರತ್ಯಕ್ಷತೆಯನ್ನು ಸ್ವತಹವಾಗಿಯೇ ಪ್ರತ್ಯಕ್ಷ ಮಾಡುವುದು. ವಚನದ ಮುಖಾಂತರ ಬಹಳ ಉತ್ತಮವಾಗಿ ಮಾಡಿದಿರಿ. ಆದರೆ ಈಗ ಸಫಲತೆಯ ವರದಾನದ ಮೂಲಕ ಬಾಬಾರವರ ಸ್ವಯಂನ ಪ್ರತ್ಯಕ್ಷತೆಯನ್ನು ಸಮೀಪದಲ್ಲಿ ತೆಗೆದುಕೊಂಡು ಬನ್ನಿರಿ.  ಪ್ರತಿಯೊಬ್ಬ ಬ್ರಾಹ್ಮಣನ ಜೀವನದಿಂದ ಸರ್ವಖಜಾನೆಗಳ ಸಂಪನ್ನತೆಯು ಅನ್ಯ ಆತ್ಮರಿಗೆ ಅನುಭವವಾಗಬೇಕು. ಈಗಿನ ಕಾಲದ ಆತ್ಮರು ನಿಮ್ಮ ಅನುಭವೀ ಮೂರ್ತಿಯ ಮೂಲಕ ಅನುಭೂತಿಯನ್ನು ಮಾಡಲು ಬಯಸುತ್ತಾರೆ. ಕೇಳಲು ಕಡಿಮೆ ಬಯಸುತ್ತಾರೆ. ಅನುಭೂತಿಯನ್ನು ಜಾಸ್ತಿ ಬಯಸುತ್ತಾರೆ. ಅನುಭೂತಿಯ ಆಧಾರವು ಖಜಾನೆಗಳ ಜಮಾದ ಖಾತೆಯಾಗಿದೆ. ಈಗ ಇಡೀ ದಿನದಲ್ಲಿ ಮಧ್ಯ ಮಧ್ಯದಲ್ಲಿ ನಿಮ್ಮ ಈ ಚಾರ್ಟನ್ನು ಪರಿಶೀಲನೆ ಮಾಡಿಕೊಳ್ಳಿ. ಸರ್ವ ಖಜಾನೆಗಳನ್ನು ಎಷ್ಟು ಜಮಾ ಮಾಡಿಕೊಂಡಿದ್ದೀರಿ ಎನ್ನುವ ಜಮಾದ ಖಾತೆಯನ್ನು ಪರಿಶೀಲನೆ ಮಾಡಿಕೊಳ್ಳಿ. ಜಮಾದ ಖಾತೆಯನ್ನು ತಯಾರು ಮಾಡಿ. ಲೆಕ್ಕವನ್ನು ತಯಾರು ಮಾಡಿ. ಒಂದು ನಿಮಿಷದಲ್ಲಿ ಎಷ್ಟು ಸಂಕಲ್ಪಗಳು ನಡೆಯುತ್ತವೆ? ಸಂಕಲ್ಪದ ಗತಿಯು ತೀವ್ರವಾಗಿದೆಯಲ್ಲವೇ, ಎಷ್ಟು ಸಫಲ ಆಗಿದೆ. ಎಷ್ಟು ವ್ಯರ್ಥ ಮಾಡಿದೆವು? ಎಷ್ಟು ಸಮರ್ಥವಾಗಿದ್ದವು. ಎಷ್ಟು ಸಾಧಾರಣವಾಗಿದ್ದವು? ಇದನ್ನು ಪರಿಶೀಲನೆ ಮಾಡಿಕೊಳ್ಳುವ ಮಷೀನ್ (ಯಂತ್ರ) ನಿಮ್ಮ ಬಳಿ ಇದೆಯಲ್ಲವೇ? ಶಿಕ್ಷಕಿಯರ ಬಳಿ ಇದೆಯೇ? ಡಬಲ್ ವಿದೇಶಿಯರ ಬಳಿ ಇದೆಯೇ? ಕೆಲಸ ಮಾಡುತ್ತದೆಯೋ ಅಥವಾ ನಿಂತುಹೋಗಿದೆಯೋ? ಪಾಂಡವರ ಬಳಿ ಚೆಕಿಂಗ್ ಮಷೀನ್ ಇದೆಯೇ? ಎಲ್ಲರ ಬಳಿಯೂ ಮಷೀನ್ ಇದೆಯಲ್ಲವೇ? ಎಲ್ಲರ ಬಳಿಯೂ ಇದೆಯೇ? ಯಾರ ಬಳಿಯಾದರೂ ಇಲ್ಲದಿದ್ದರೆ ಅರ್ಜಿ ಹಾಕಿಕೊಳ್ಳಿರಿ. ಹೇಗೆ ಎಲ್ಲಿಯಾದರೂ ಆಫೀಸ್ ತೆರೆಯಬೇಕಾದರೆ, ಆಫೀಸನ್ನು ವ್ಯವಸ್ಥೆ ಮಾಡುವುದಕ್ಕಿಂತ ಮುಂಚೆ ವಿಚಾರ ಮಾಡುತ್ತೀರಿ, ಈಗಿನ ಕಾಲದಲ್ಲಿ ಕಂಪ್ಯೂಟರ್ ಬೇಕಾಗುತ್ತದೆ, ಈ ಮೇಲ್, ಟೈಪ್ ರೈಟರ್, ಜೆರಾಕ್ಸ್ ಮಷಿನ್ ಬೇಕಾಗುತ್ತದೆ. ಬೇಕಾಗುತ್ತದೆಯಲ್ಲವೇ? ಹಾಗೆಯೇ ಬ್ರಾಹ್ಮಣ ಜೀವನದಲ್ಲಿ ನಿಮ್ಮ ಮನಸ್ಸಿನ ಆಫೀಸ್ನಲ್ಲಿ ಈ ಎಲ್ಲಾ ಯಂತ್ರಗಳು ಇವೆಯೇ? ಅಥವಾ ಇಲ್ಲವೋ?

ಬಾಪ್‌ದಾದಾರವರು ಮುಂಚೆಯೂ ಸಹ ಏನು ತಿಳಿಸಿದ್ದಾರೆಂದರೆ ತಾನು ಎವರ್‌ರೆಡಿ ಸದಾ ಸಿದ್ಧ ಆಗಿದ್ದೇನೆಂದು ತಿಳಿಸುವ ಸಲುವಾಗಿ ಬಾಪ್‌ದಾದಾರವರ ಬಳಿ ಪ್ರಕೃತಿಯೂ ಸಹ ಬರುತ್ತದೆ. ಸಮಯವು ಬ್ರಾಹ್ಮಣರು ತಯಾರಾಗಿದ್ದಾರೆಯೇ ಎಂದು ಬ್ರಾಹಣರನ್ನು ಮತ್ತೆ ಮತ್ತೆ ನೋಡುತ್ತಾ ಇರುತ್ತದೆ. ಬ್ರಾಹ್ಮಣರ ಬಳಿ ಮತ್ತೆ ಮತ್ತೆ ಸುತ್ತುಹಾಕುತ್ತದೆ. ಆದ್ದರಿಂದ ಬಾಪ್‌ದಾದಾರವರು ಮಕ್ಕಳನ್ನು ಕೇಳುತ್ತಾರೆ. ಕೈಯಂತು ಬಹಳ ಚೆನ್ನಾಗಿ ಎತ್ತುತ್ತೀರಿ. ಬಾಪ್‌ದಾದಾರವರೂ ಸಹ ಖುಷಿಯಾಗಿ ಬಿಡುತ್ತಾರೆ. ಈಗ ಹೇಗೆ ಎವರೆಡಿ ಆಗಬೇಕೆಂದರೆ ಪ್ರತಿಯೊಂದು ಸಂಕಲ್ಪ, ಪ್ರತಿಯೊಂದು ಸೆಕೆಂಡ್, ಪ್ರತಿಯೊಂದು ಶ್ವಾಸ ಏನು ವ್ಯತೀತವಾಗುತ್ತದೆಯೋ ಅದು ವಾಹ್! ವಾಹ್! ಎಂದು ಪ್ರಶಂಸಾರ್ಹವಾಗಿರಬೇಕು. ಅಯ್ಯೋ ಅಲ್ಲ ವಾಹ್! ವಾಹ್! ಎನ್ನುವಂತಹರಾಗಬೇಕು. ಈಗ ಒಮ್ಮೊಮ್ಮೆ ವಾಹ್ ವಾಹ್! ಎನ್ನುವಂತಹ ಸಮಯವಿರುತ್ತದೆ, ಒಮ್ಮೊಮ್ಮೆ ವಾಹ್ ಎನ್ನುವುದಕ್ಕೆ ಬದಲಾಗಿ ಅಯ್ಯೋ ಎನ್ನುವಂತಹದಾಗಿ ಬಿಡುತ್ತದೆ. ಒಂದೊಂದು ಸಮಯದಲ್ಲಿ ಬಿಂದು ಹಾಕುತ್ತಾರೆ, ಒಂದೊಂದು ಸಮಯದಲ್ಲಿ ಪ್ರಶ್ನಾರ್ಥಕ ಚಿಹ್ನೆ ಹಾಗೂ ಆಶ್ಚರ್ಯದ ಚಿಹ್ನೆಯು ಬಂದುಬಿಡುತ್ತದೆ. ನಿಮ್ಮೆಲ್ಲರ ಮನಸ್ಸೂ ಸಹ ಭೇಷ್ ಎಂದು ಹೇಳಬೇಕು. ಹಾಗೂ ಯಾರ ಸಂಬಂಧ -

ಸಂಪರ್ಕದಲ್ಲಿ ಬರುತ್ತೀರೋ, ಅದು ಬ್ರಾಹ್ಮಣರ ಸಂಬಂಧ ಸಂಪರ್ಕವಾಗಿರಬಹುದು ಅಥವಾ ಸೇವೆಯನ್ನು ಮಾಡುವವರ ಸಂಬಂಧ ಸಂಪರ್ಕವಾಗಿರಬಹುದು. ಅವರ ಮೂಲಕ ಭೇಷ್-ಭೇಷ್ ಎನ್ನುವ ಶಬ್ದವು ಬರಬೇಕು. ಒಳ್ಳೆಯದು.

ಈ ಸೀಸನ್ ನ ಕೊನೆಯ ಮಿಲನಕ್ಕೆ ಎಷ್ಟು ಸಮಯವಿದೆ? (ಮೂರು ತಿಂಗಳು) ಮೂರು ತಿಂಗಳ ನಂತರ ಬಾಪ್‌ದಾದಾ ಪ್ರತಿಯೊಂದು ಮಗುವಿನ ಜಮಾದ ಖಾತೆಯ ಅಕೌಂಟನ್ನು ಪರಿಶೀಲಿಸುತ್ತಾರೆ. ಸರಿಯೇ? ಮೂರು ತಿಂಗಳ ನಂತರ ಪರಿಶೀಲಿಸಿಕೊಳ್ಳಲು ತಯಾರಾಗಿರುವವರು ಕೈಯನ್ನು ಎತ್ತಿ. ತಯಾರಾಗಿ ಬಿಡುತ್ತೀರಾ? ಎಷ್ಟು ಪ್ರತಿಶತದಲ್ಲಿ ತಯಾರಾಗುತ್ತೀರಿ? ಉತ್ಸಾಹವಂತೂ ಚೆನ್ನಾಗಿದೆ. ಕೆಲವರು ಎತ್ತುತ್ತಿಲ್ಲ, ಯೋಚಿಸುತ್ತಿದ್ದಾರೆ. ಮೂರು ತಿಂಗಳ ನಂತರ ಅಕೌಂಟ್ ಚೆಕ್ಕಿಂಗ್ ಆಗುತ್ತದೆ. ನೀವು ನಿಮ್ಮ ಅಕೌಂಟನ್ನು ಪರಿಶೀಲಿಸಿಕೊಳ್ಳಿರಿ. ನಂತರ ಬಾಪ್‌ದಾದಾ ಪರಿಶೀಲಿಸುತ್ತಾರೆ. ಪರಿಶೀಲಿಸಲು ಬಾಪ್‌ದಾದಾರವರಿಗೆ ಸಮಯ ಹಿಡಿಸುವುದಿಲ್ಲ. ಇಲ್ಲಿ (ಮಧುಬನ) ದಲ್ಲಂತೂ ಅಕೌಂಟ್ಸ್ ಗಾಗಿ ಎಷ್ಟು ಬುದ್ಧಿಯನ್ನು ಉಪಯೋಗಿಸಬೇಕಾಗುತ್ತದೆ? ಉಪಯೋಗಿಸಬೇಕಾಗುತ್ತದೆ ಅಲ್ಲವೇ! ದಣಿದು ಬಿಡುತ್ತೀರಿ. ಮಧುಬನದವರು ಅಕೌಂಟ್ಸನ್ನು ಇಟ್ಟುಕೊಳ್ಳುವುದರಲ್ಲಿ ಬುದ್ಧಿಯುಳ್ಳವರೇ ತಾನೇ! ಎಲ್ಲವೂ ವಾಹ್! ವಾಹ್! ಆಗಿಬಿಡುತ್ತವೆ. ಏನೂ ಪರವಾಗಿಲ್ಲ, ಬಾಪ್‌ದಾದಾ ಟೀಚರ್ಸನ್ನು ನೋಡಿ ಬಹಳ ಖುಷಿ ಪಡುತ್ತಿದ್ದಾರೆ. (ಎಲ್ಲರೂ ಚಪ್ಪಾಳೆಯನ್ನು ಹೊಡೆದರು) ಚಪ್ಪಾಳೆ ಅಂತೂ ಚೆನ್ನಾಗಿ ಹೊಡೆಯುತ್ತಿದ್ದೀರಿ. ಒಂದುವಿಧವಾಗಿ ನೀವು ಸಹ ಟೀಚರ್ಸೇ ತಾನೇ ಅಥವಾ ಟೀಚರ್ಸ್ ಮಾತ್ರ ಟೀಚರ್ಸ್ ಆಗಿದ್ದಾರೆಯೇ? ಕೋರ್ಸ್ ಹೇಳುತ್ತಿದ್ದೀರಿ ಅಥವಾ ತಂದೆಯ ಸಂದೇಶವನ್ನು ಕೊಡುತ್ತಿದ್ದೀರಿ ಅರ್ಥಾತ್ ಏನಾಗುತ್ತಿದ್ದೀರಿ? ಟೀಚರ್ಸಾಗುತ್ತಿದ್ದೀರಲ್ಲವೇ, ಈ ವರ್ಷದಲ್ಲಿ ಬಾಪ್‌ದಾದಾ ಒಂದು ನವೀನತೆಯನ್ನು ನೋಡಬೇಕೆಂದುಕೊಳ್ಳುತ್ತಿದ್ದಾರೆ. ಹೇಳಬೇಕೇ, ಮಾಡುತ್ತೀರಾ, ಪಾಂಡವರು ಮಾಡುತ್ತೀರಾ? ಪಕ್ಕಾ? ಪಕ್ಕ ಆಗಿ ಮಾಡುತ್ತೀರಾ? ಏನಾದರೂ ಆಗಲಿ ಮಾಡಲೇಬೇಕು. ತಯಾರೇನಾ? ಪಾಂಡವರೆಲ್ಲರೂ ತಯಾರಾಗಿದ್ದೀರಾ? ಯುವಕರು ಸಹ ತಯಾರಾಗಿದ್ದೀರಾ? (ಯುವಕರ ಗುಂಪು ಕುಳಿತಿದ್ದರು) ಬಾಪ್‌ದಾದಾ ಹೇಳಿರುವುದನ್ನು ಮಾಡುತ್ತೀರಾ? ಮಾತೆಯರು ಮಾಡುತ್ತೀರಾ? ಒಳ್ಳೆಯದು. ಮಕ್ಕಳ ಧೈರ್ಯಕ್ಕೆ ಶುಭಾಶಯಗಳು. ಈಗ ಒಂದು ವಿಷಯವನ್ನು ಕೇಳಿರಿ ಎರಡು ಕೈಗಳಿಂದ ಚಪ್ಪಾಳೆಯನ್ನು ಹೊಡೆಯಬೇಡಿರಿ. ಒಂದೇ ಕೈಯನ್ನು ಅಲುಗಾಡಿಸಿರಿ, ಸಾಕು. ಚಪ್ಪಾಳೆಯನ್ನು ಹೊಡೆದರೆ ಯುದ್ಧವಾಗಿ ಬಿಡುತ್ತದೆ ಅಲ್ಲವೇ, ಇಂದು ವಂಶಕ್ಕೆ ಆದಿಪುರುಷನಾದ ಬಾಪ್‌ದಾದಾ (ಗ್ರೇಟ್ ಗ್ರೇಟ್ ಗ್ರಾಂಡ್ ಫಾದರ್) ಬ್ರಹ್ಮಾಬಾಬಾರವರಿಗೆ ಈ ದಿನ ಯಾವ ಒಂದು ಶುಭ ಆಸೆ ಇದೆ ? ನನ್ನ ಗ್ರೇಟ್ ಗ್ರೇಟ್ ಗ್ರಾಂಡ್ ಸನ್ಸ್ಗೆ ವಿಶೇಷವಾಗಿ ಒಂದು ಮಾತನ್ನು ಹೇಳಬೇಕಾಗಿದೆ. ಅದು ಏನಾಗಿದೆ ಎಂದರೆ ಸದಾ ಪ್ರತಿಯೊಬ್ಬ ಮಗುವಿನ ಮುಖದಲ್ಲಿ ಒಂದನೆಯದಾಗಿ ಸದಾ ಆತ್ಮೀಯತೆಯ ಮಗುಳ್ನಗೆ ಇರಬೇಕು. ಕೇಳಿಸಿಕೊಂಡಿದ್ದೀರಾ? ಚೆನ್ನಾಗಿ ಕಿವಿ, ತೆಗೆದು ಕೇಳಿರಿ. ಹಾಗೂ ಎರಡನೆಯದಾಗಿ ಬಾಯಿಯಿಂದ ಬರುವ ವಚನದಲ್ಲಿ ಮಧುರತೆಯು ಸದಾ ಇರಲಿ. ಒಂದು ಶಬ್ದವೂ ಸಹ ಮಧುರತೆ ಇಲ್ಲದೇ ಬರಬಾರದು. ಮುಖದಲ್ಲಿ ಆತ್ಮೀಯತೆಯು ಇರಲಿ. ಬಾಯಿಯ ನುಡಿಯಲ್ಲಿ ಮಧುರತೆ ಇರಲಿ. ಹಾಗೂ ಮನಸ್ಸು, ಬುದ್ಧಿಯಲ್ಲಿ ಸದಾ ಶುಭಭಾವನೆ, ದಯಾಹೃದಯದ ಭಾವನೆ, ದಾತಾತನದ ಭಾವನೆ ಇರಲಿ. ಪ್ರತಿಯೊಂದು ಹೆಜ್ಜೆಯಲ್ಲಿ ಸದಾ ಶುಭಭಾವನೆ, ದಯಾಹೃದಯದ ಭಾವನೆ, ದಾತಾತನದ ಭಾವನೆ ಇರಲಿ. ಪ್ರತಿಯೊಂದು ಹೆಜ್ಜೆಯಲ್ಲಿಯೂ ಸಹ ತಂದೆಯನ್ನು ಅನುಸರಿಸಬೇಕು, ಅನುಸರಿಸಲು ಆಗುತ್ತದೆಯೇ? ನಿಮಿತ್ತ ಸಹೋದರಿಯರು ಇದನ್ನು ಮಾಡಬಲ್ಲಿರಾ? ಯುವ ವರ್ಗದವರು ತಂದೆಯನ್ನು ಅನುಸರಿಸಲು ಆಗುತ್ತದೆಯೇ?

ಬಾಪ್‌ದಾದಾರವರ ಬಳಿ ಯುವಕರಿಂದ ಉತ್ತಮವಾದ ಫಲಿತಾಂಶ ಬಂದಿದೆ. ತಮ್ಮ ಉತ್ತಮವಾದ ಫಲಿತಾಂಶಕ್ಕೆ ಪದಮಗಳಷ್ಟು ಅಭಿನಂದನೆಗಳು. ಯುವಕರು ಬಹಳ ಉತ್ತಮವಾದ ಅನುಭವವನ್ನು ಮಾಡಿರುವುದನ್ನು ನೋಡಿ ಬಾಪ್‌ದಾದಾ ಖುಷಿಯಾದರು. ಹಾಗೂ ತಮ್ಮ ಅನುಭವವನ್ನು ಸಮ್ಮುಖದಲ್ಲಿ ಕೇಳಿದರು. ಆದರೆ ಈಗ ಈ ಅನುಭವವನ್ನು ಅಮರಭವ!ದ ವರದಾನದಿಂದ ಅವಿನಾಶಿಯಾಗಿಟ್ಟುಕೊಳ್ಳಬೇಕು. ಏನೇ ಆದರೂ ಸಹ ನಿಮ್ಮ ಆತ್ಮಿಕ ಅನುಭವವನ್ನು ಸದಾ ವೃದ್ಧಿ ಮಾಡಿಕೊಳ್ಳುತ್ತಾ ಇರಿ. ಆದರೆ ನಿಮ್ಮ ಅನುಭವ ಕಡಿಮೆ ಆಗಬಾರದು. ಮೂರು ತಿಂಗಳಿನ ನಂತರ ನೀವು ಮಧುಬನದಲ್ಲಿ ಬರಬಹುದು ಅಥವಾ ಬಾರದಿರಬಹುದು. ಏಕೆಂದರೆ ಮೂರು ತಿಂಗಳಿನ ನಂತರ ವಿದೇಶಗಳಿಂದಂತೂ ಬರಲು ಸಾಧ್ಯವಿಲ್ಲ ಆದರೆ ನಿಮ್ಮ ಖಾತೆಯನ್ನು ಇಟ್ಟುಕೊಂಡು ಬಾಪ್‌ದಾದಾರವರ ಬಳಿ ಕಳುಹಿಸಿಕೊಡಬೇಕು. ತಮ್ಮ ಲೆಕ್ಕದ ಖಾತೆಯನ್ನು ಬಾಪ್‌ದಾದಾರವರು ಸರಿಯಾಗಿದೆಯೇ ಎಂದು ಹೇಳುತ್ತಾ ಅದು ಎಷ್ಟು ಪರ್ಸಂಟೇಜೆಂದು (ಶೇಕಡ) ತಿಳಿಸುವರು. ಈ ರೀತಿ ಮಾಡುವುದು ಸರಿಯಾಗಿದೆಯಲ್ಲವೇ? ಸರಿಯಾಗಿದೆ ಎನ್ನುವುದಾದರೆ ಒಂದು ಕೈನ ಚಪ್ಪಾಳೆ ತಟ್ಟಿರಿ. ಒಳ್ಳೆಯದು.

ಇಂದು ಶುಭಾಶಯಗಳ ದಿನವಾಗಿರುವುದರಿಂದ ಇನ್ನೂ ಒಂದು ಶುಭ ಸಮಾಚಾರವನ್ನು ಕೇಳಿದೆವು ಹಾಗೂ ನೋಡಿಯೂ ಸಹ ನೋಡಿದರು. ಸಣ್ಣ ಸಣ್ಣ ಮಕ್ಕಳು ಕಿರೀಟಧಾರಿಗಳಾಗಿ ಕುಳಿತುಕೊಂಡಿದ್ದಾರೆ. ನಿಮಗಂತೂ ಕಿರೀಟವು ಸತ್ಯಯುಗದಲ್ಲಿ ಸಿಗುತ್ತದೆ, ಆದರೆ ಇವರಿಗೆ ಈಗಲೇ ಸಿಕ್ಕಿಬಿಟ್ಟಿದೆ. ನಿಂತುಕೊಳ್ಳಿರಿ. ಎಲ್ಲರೂ ಕಿರೀಟಧಾರಿ ತಂಡವನ್ನು ನೋಡಿರಿ. ಮಕ್ಕಳು ಸದಾ ಸತ್ಯ ಹೃದಯದವರಾಗಿರುತ್ತಾರೆ. ಇವರು ಭಾಷೆಯನ್ನು ಅರ್ಥ ಮಾಡಿಕೊಳ್ಳದಿರಬಹುದು, ಆದರೆ ಸತ್ಯ ಹೃದಯವುಳ್ಳವರಾಗಿದ್ದೀರಲ್ಲವೇ! ಒಳ್ಳೆಯದಾಯಿತು. ಮಕ್ಕಳ ಉತ್ತಮ ಫಲಿತಾಂಶವನ್ನೂ ಸಹ ಬಾಪ್‌ದಾದಾರವರು ನೋಡಿದರು, ಅಭಿನಂದನೆಗಳು. ಒಳ್ಳೆಯದು.

ಡಬಲ್ ವಿದೇಶಿಯರು:ಇವರ ಪತ್ರ ಹಾಗೂ ಚೀಟಿಗಳನ್ನೂ ಸಹ ನೋಡಿದರು. ಆದರೆ ಕೆಲವು ಚೀಟಿಗಳಲ್ಲಿ ಬಾಪ್‌ದಾದಾ ಒಂದು ಮಾತನ್ನು ನೋಡಿದರು. ಕೆಲವರು ಬಹಳ ಉತ್ಸಾಹ ಉಲ್ಲಾಸದಿಂದ ತಮ್ಮ ಪರಿವರ್ತನೆಯನ್ನೂ ಸಹ ಬರೆದಿದ್ದಾರೆ. ಕೆಲವರು ತಮ್ಮ ಉತ್ಸಾಹವನ್ನು ಬರೆದಿದ್ದಾರೆ. ಆದರೆ ಕೆಲವರು ತಮ್ಮ ಸ್ವಲ್ಪ ಸೋಮಾರಿತನವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಎಂದಿಗೂ ಹುಡುಗಾಟಿಕೆ(ಸೋಮಾರಿತನ) ಬಾರದಂತೆ ಎಚ್ಚರಿಕೆಯಿಂದ ಇರಬೇಕು. ಬಾಪ್‌ದಾದಾರವರಿಗೆ ಮೊದಲನೆಯದಾಗಿ ಸೋಮಾರಿತನ ಇಷ್ಟವಾಗುವುದಿಲ್ಲ ಹಾಗೂ ಎರಡನೆಯದಾಗಿ ಮನಸ್ಸನ್ನು ಬಲಹೀನ ಮಾಡಿಕೊಳ್ಳುವುದೂ ಸಹ ಇಷ್ಟವಾಗುವುದಿಲ್ಲ. ಏನೇ ಆದರೂ ವಿಶಾಲ ಮನಸ್ಸನ್ನು ಇಟ್ಟುಕೊಳ್ಳಿ. ಮನಸ್ಸು ಬಲಹೀನವಾದಾಗ ಮನಸ್ಸು ಸಂಕುಚಿತವಾಗುತ್ತದೆ. ಮನಸ್ಸಿನ ಖುಷಿ ವಿಶಾಲ ಮನಸ್ಸುಳ್ಳದ್ದಾಗಿರುತ್ತದೆ. ಆದುದರಿಂದ ಮನಸ್ಸನ್ನು ಬಲಹೀನ ಮಾಡಿಕೊಳ್ಳಬಾರದು ಹಾಗೂ ಸೋಮಾರಿತನದಲ್ಲಿ ಬರಬಾರದು. ಸದಾ ಉತ್ಸಾಹ ಉಲ್ಲಾಸದಲ್ಲಿ ಹಾರುತ್ತಿರಬೇಕು. ಬಾಪ್‌ದಾದಾರವರಿಗೆ ಡಬಲ್ ವಿದೇಶದವರಲ್ಲಿ ಎಣಿಸಲಾರದಷ್ಟು ಆಸೆಗಳಿವೆ. ಭಾರತೀಯ ಆತ್ಮರು ಆಶ್ಚರ್ಯಚಕಿತರಾಗುವಂತೆ ಡಬಲ್ ವಿದೇಶದವರು ತಮ್ಮ ಪ್ರತಿಭೆಯನ್ನು ತೋರಿಸಬೇಕು. ಆ ದಿನವೂ ಸಹ ಅತಿ ಶೀಘ್ರದಲ್ಲಿಯೇ ಬರಲಿದೆ. ಆ ದಿನ ಬರುತ್ತದೆಯಲ್ಲವೇ! (ಅತಿ ಬೇಗ ಬೇಗ ಬರಲಿದೆ) ಹೌದು ಎಂದಾದರೂ ಹೇಳಿರಿ. ಆ ದಿನದ ಸಲುವಾಗಿ ಬಾಪ್‌ದಾದಾ ಮುಂಚಿತವಾಗಿ ಅಭಿನಂದನೆಗಳ ತಟ್ಟೆಗಳನ್ನು ತುಂಬಿಕೊಡುತ್ತಿದ್ದಾರೆ. ಡಬಲ್

ವಿದೇಶದವರಲ್ಲಿ ಇಂತಹ ಧೈರ್ಯವನ್ನು ನೋಡುತ್ತಿದ್ದೀರಲ್ಲವೇ. ಧೈರ್ಯವುಳ್ಳವರಲ್ಲವೇ? ವಿದೇಶಗಳಲ್ಲಿಯೂ ಸಹ ಬಹಳಷ್ಟು ಭರವಸೆಗಳಿವೆ. ಬಹಳ ಚೆನ್ನಾಗಿದೆ. ಉತ್ತಮ ಯುವಕರೂ ಸಹ ಇದ್ದಾರೆ. ಪ್ರವೃತ್ತಿಯಲ್ಲಿರುವವರು, ಕುಮಾರಿಯರೂ ಸಹ ಬಹಳಷ್ಟು ಇದ್ದಾರೆ. ವಿದೇಶದ ಮಕ್ಕಳು ಕಮಾಲ್ ಮಾಡಿದ್ದಾರೆ. ಸರಿಯಲ್ಲವೇ. ಸಿಂಧಿ ಪರಿವಾರದವರು ಹೇಳಿ ಏನು ಕಮಾಲ್ ಮಾಡುತ್ತೀರಿ? ಆದರೆ ನೀವು ಬ್ರಾಹ್ಮಣರಾಗಿದ್ದು ನಿಮಿತ್ತ ಮಾತ್ರವಾಗಿ ಸಿಂಧಿಗಳಾಗಿದ್ದೀರಿ. ಏನು ಮಾಡುತ್ತೀರಿ ಹೇಳಿ? (ತಂದೆಯ ಹೆಸರನ್ನು ಪ್ರಖ್ಯಾತ ಮಾಡುವೆವು) ಯಾವಾಗ ಮಾಡುವಿರಿ? (ಈ ವರ್ಷದಲ್ಲಿ) ನಿಮ್ಮ ಬಾಯಿಯಲ್ಲಿ ಗುಲಾಬ್ ಜಾಮೂನ್ ಬೀಳಲಿ. ಧೈರ್ಯಶಾಲಿಗಳಾಗಿದ್ದಾರೆ. (ನಿಮ್ಮ ವರದಾನ ಜೊತೆಯಲ್ಲಿದೆ) ವರದಾತ ತಂದೆಯೇ ಜೊತೆ ಇರುವಾಗ ವರದಾನ ದೊಡ್ಡ ಮಾತೇನಲ್ಲ. ಒಳ್ಳೆಯದು.

ಯಾರು ಈ ಕಲ್ಪದಲ್ಲಿ ಮೊದಲನೆಯ ಬಾರಿ ಬಂದಿದ್ದೀರೋ ಅವರು ನಿಂತುಕೊಳ್ಳಿ. ಯಾರು ಮೊದಲನೆಯ ಸಲ ಬಂದಿರುವಂತಹ ಮಕ್ಕಳಿಗೆ ಬಾಪ್‌ದಾದಾ ಈ ರೀತಿ ಹೇಳುತ್ತಿದ್ದಾರೆ - ನೀವು ಅಂತ್ಯದಲ್ಲಿ ಬಂದಿದ್ದರೂ ಸಹ ಮುಂದೆ ಹೋಗಬೇಕು. ಹೇಗೆ ಮುಂದುವರೆಯಬೇಕೆಂದರೆ ನಿಮ್ಮನ್ನು ಎಲ್ಲರೂ ನೋಡಿ ಖುಷಿಯಾಗಬೇಕು. ಹಾಗೂ ಎಲ್ಲರ ಮುಖದಿಂದ ಇದು ಕಮಾಲ್ ಆಗಿದೆ..... ಕಮಾಲ್ ಆಗಿದೆ.... ಕಮಾಲ್ ಆಗಿದೆ.. ಎಂಬ ಶಬ್ದವು ಬರಬೇಕು. ಇಷ್ಟೊಂದು ಧೈರ್ಯವೂ ಇದೆಯೇ? ಮೊದಲನೆಯ ಸಲ ಬಂದಿರುವವರಿಗೆ ಧೈರ್ಯ ಇದೆಯಲ್ಲವೇ! ಹೊಸ ವರ್ಷವನ್ನು ಆಚರಣೆ ಮಾಡಲು ಬಂದಿರುವುದರಿಂದ ಈ ವರ್ಷದಲ್ಲಿ ಏನಾದರು ಕಮಾಲ್(ಅದ್ಭುತ) ಮಾಡುತ್ತೀರಲ್ಲವೇ! ಆದರೂ ಸಹ ಬಾಪ್‌ದಾದಾರವರಿಗೆ ಎಲ್ಲಾ ಮಕ್ಕಳು ಅತಿ ಪ್ರಿಯವಾಗಿದ್ದಾರೆ ಏಕೆಂದರೆ ಕೊನೆಗೂ ಮಕ್ಕಳು ಬಹಳ ಬುದ್ಧಿವಂತಿಕೆಯ ಕಾರ್ಯವನ್ನು ಮಾಡಿದ್ದಾರೆ, ಏನೆಂದರೆ ಟೂ ಲೇಟ್ ಆಗುವ ಮೊದಲೇ ತಂದೆಯ ಮಕ್ಕಳಾಗಿದ್ದೀರಿ. ಇಷ್ಟೊಂದು ಅಂತ್ಯದಲ್ಲಿ ಬಂದಿದ್ದರೂ ಸಹ ಈ ವಿಶಾಲ ಪ್ರಾಂಗಣದಲ್ಲಿ ಕುಳಿತುಕೊಳ್ಳಲು ಸ್ಥಳಾವಕಾಶ ಸಿಕ್ಕಿದೆಯಲ್ಲವೆ? ವಿಶ್ರಾಂತಿಗಾಗಿ ಮಂಚ ಅಥವಾ ಹಾಸಿಗೆಯಂತು ದೊರೆತಿದೆಯಲ್ಲವೇ! ಆದರೆ ಯಾವಾಗ ಟೂ ಲೇಟ್ ಬೋರ್ಡ್ ಹಾಕಲ್ಪಡುತ್ತದೆಯೋ ಆಗ ಕ್ಯೂನಲ್ಲಿ ನಿಲ್ಲಬೇಕಾಗುತ್ತದೆ, ಆದುದರಿಂದ ಉತ್ತಮ ಸಮಯದಲ್ಲಿ ಬಾಪ್‌ದಾದಾರವರನ್ನು ಗುರುತಿಸಿ ಅರಿತುಕೊಂಡಿದ್ದೀರಿ. ಈ ರೀತಿ ನೀವು ಬಹಳ ಬುದ್ಧಿಯುಳ್ಳ ಕಾರ್ಯವನ್ನು ಮಾಡಿದ್ದೀರಿ.

ಹಳೆಯ ಪಾಂಡವರು ಎದ್ದು ನಿಲ್ಲಿರಿ, ಒಳ್ಳೆಯದು. ಪಾಂಡವರ ಮಹಿಮೆಯೂ ಸಹ ಕಡಿಮೆಯಾದದೇನಲ್ಲ ಬಾಪ್‌ದಾದಾರವರ ಬಿರುದು(ಟೈಟಲ್) ಪಾಂಡವಪತಿ. ಇದು ಪಾಂಡವರ ಮಹಿಮೆಯೇ ತಾನೇ! ವಿಜಯೀ ಪಾಂಡವರು ಎಂದು ಸಹ ಮಹಿಮೆ ಇದೆ. ಶಕ್ತಿಯರಿಗೆ ವರದಾನಿ ಎಂಬ ಮಹಿಮೆ ಇದೆ ಆದರೆ ಪಾಂಡವರಿಗೆ ವಿಜಯೀ ಎಂಬ ಮಹಿಮೆ ಇದೆ. ಹಾಗಾದರೆ ಪ್ರತಿಯೊಬ್ಬ ಪಾಂಡವರ ಮಸ್ತಕದಲ್ಲಿ ಯಾವ ತಿಲಕ ಇಡಲಾಗಿದೆ? ವಿಜಯೀ ತಿಲಕ. ಹಾಗಾದರೆ ನೀವು ನಿಮ್ಮ ಮಸ್ತಕದಲ್ಲಿ ವಿಜಯೀ ತಿಲಕವನ್ನು ನೋಡಿಕೊಳ್ಳುತ್ತಿದ್ದೀರಾ ಅಥವಾ ಮರೆತು ಹೋಗುತ್ತಿದ್ದೀರಾ? ಸದಾ ನಿಮ್ಮನ್ನು ನೀವು ವಿಜಯೀ ಪಾಂಡವರನ್ನಾಗಿ ಮತ್ತು ವಿಜಯೀ ತಿಲಕವು ಹೊಳೆಯುತ್ತಿರುವಂತೆ ನೋಡಿಕೊಳ್ಳಿರಿ. ವಿಜಯ ಎಂಬುದು ಪ್ರತಿಯೊಬ್ಬ ಪಾಂಡವನ ಜನ್ಮ ಸಿದ್ಧ ಅಧಿಕಾರವಾಗಿದೆ. ನೀವು ಅಧಿಕಾರಿಗಳಲ್ಲವೇ ಹಾಗಾದರೆ ಬಾಪ್‌ದಾದಾ ಪಾಂಡವರಿಗೆ ವಿಜಯೀ ರತ್ನಗಳ ರೂಪದಲ್ಲಿ ಶುಭಾಶಯಗಳನ್ನು ಕೊಡುತ್ತಿದ್ದಾರೆ. ಬಹಳ ಒಳ್ಳೆಯವರು ಮತ್ತು ಪಾಂಡವರೇನು ಕಡಿಮೆಯಾದವರಲ್ಲ. ಆದಿಯ ಹಳೆಯ ಮಾತೆಯರು ಎದ್ದು ನಿಲ್ಲಿ. ಮಾತೆಯರ ವಿಶೇಷತೆ ಏನು?

ಶ್ರೇಷ್ಠಾತಿ ಶ್ರೇಷ್ಠವಾದ ಕರ್ತವ್ಯದಲ್ಲಿ ಇರುವವರು ನಿಮ್ಮ ಚರಣಗಳ ಮೇಲೆ ಬಾಗುತ್ತಾರೆ ಗುರುಮಾತಾ ಎಂಬ ಯಾವ ಮಹಿಮೆಯಾದರೆ ಇದೆಯೋ ಅಂತಹ ಸತ್ಯವಾದ ಪಾತ್ರವನ್ನು ಮಾತೆಯರಾದ ನೀವು ಅಭಿನಯಿಸುತ್ತೀರಿ. ಯಾವುದಾದರೂ ಶ್ರೇಷ್ಠ ದಿನದಂದು ಭಾರತ ಮಾತೆಗೆ ಜೈ ಎನ್ನುತ್ತಾರೆ. ಇನ್ನು ಮುಂದೆ ಮುಂದೆ ಮಾತೆಯರಾದ ನಿಮಗೆ ಜೈ ಜೈಕಾರಗಳು ಹೇಳುತ್ತಾರೆ. ಇಷ್ಟು ಉನ್ನತವಾದ ಕರ್ತವ್ಯವನ್ನು ತಂದೆಯು ಮಾತೆಯರಿಗೆ ಕೊಟ್ಟಿದ್ದಾರೆ. ಮಾತೆಯರು ಜೈ ಜೈಕಾರಗಳ ಧ್ವನಿಯನ್ನು ಕೇಳುತ್ತೀರಾ? ಗುರು ಮಾತೆಯ ಮಹಿಮೆಯನ್ನು ಪ್ರತ್ಯಕ್ಷ ರೂಪದಲ್ಲಿ ತೋರಿಸುತ್ತಾರೆ. ಅಂತಹ ಮಾತೆಯರೇ ಅಲ್ಲವೇ! ನಿದ್ದೆ ಮಾಡುವ ಆತ್ಮರನ್ನು ಎಚ್ಚರಗೊಳಿಸುತ್ತಾರೆ, ಮಾತೆಯರದು ಬಹಳ ಒಳ್ಳೆಯ ಪಾತ್ರವಾಗಿದೆ. ಯಾರಾದರೆ ನಿಮ್ಮನ್ನು ನಿಂದಿಸಿದ್ದಾರೆಯೋ ಅವರು ನಿಮ್ಮನ್ನು ಕೀರ್ತಿಸುತ್ತಾರೆ. ಏಕೆಂದರೆ ನೀವು ತಂದೆಯವರಾಗಿ ಬಿಟ್ಟಿದ್ದೀರಲ್ಲವೇ. ಶ್ರೇಷ್ಠಾತಿ ಶ್ರೇಷ್ಠವಾದ ಭಗವಂತನ ಸಾಂಗತ್ಯದಲ್ಲಿ ಇದ್ದೀರಿ. ಈ ಆತ್ಮಿಕ ನಶೆಯು ಇದೆಯಲ್ಲವೇ ಹಾಗಾದರೆ ಒಳ್ಳೆಯದು.

ಕುಮಾರಿಯರು ಎದ್ದುನಿಲ್ಲಿ, ಕುಮಾರಿಯರು ಕೈಯನ್ನು ಅಲುಗಾಡಿಸಿ. ಕುಮಾರಿಯರು ಸಹ ಬಹಳಷ್ಟು ಜನರಿದ್ದಾರೆ. ಈಗ ನೀವು ಸಾಧಾರಣ ಕುಮಾರಿಯಲ್ಲ. ಈಗ ನೀವೆಲ್ಲರೂ ಸುಕುಮಾರಿಯರಾಗಿ, ಶ್ರೇಷ್ಠ ಕುಮಾರಿಯರಾಗಿ ಬಿಟ್ಟಿದ್ದೀರಿ. ಕುಮಾರಿಯರ ಬಗ್ಗೆ ಬಾಪ್‌ದಾದಾರವರ ಮನಸ್ಸಿನಲ್ಲಿ ಒಂದು ಉತ್ಸಾಹವಿದೆ. ಹೇಳಬೇಕೇ? ಕುಮಾರಿಯರು ಕೇಳುತ್ತೀರಾ? ಕುಮಾರಿಯರಿಗೆ ಮಹಿಮೆ ಇದೆ, 21 ವಂಶಗಳನ್ನು ಉದ್ಧರಿಸುವವರು ಎಂದು. ಹಾಗಾದರೆ ಬಾಪ್‌ದಾದಾ ಹೇಳುತ್ತಿದ್ದಾರೆ ಈ ವರ್ಷದಲ್ಲಿ ಪ್ರತಿಯೊಬ್ಬ ಕುಮಾರಿ 21 ವಂಶಗಳನ್ನು ಬಿಟ್ಟುಬಿಡಿ, ಆದರೆ ಒಬ್ಬೊಬ್ಬರು ಒಂದೊಂದು ವಾರಸನನ್ನು ತಯಾರು ಮಾಡಬೇಕು. ಎಷ್ಟು ಜನರಿರುತ್ತಾರೆ (ಸಾವಿರ ಜನ) ಅರ್ಥಾತ್ ಸಾವಿರ ಜನ ವಾರಸರು ಈ ವರ್ಷದಲ್ಲಿ ತಯಾರಾಗುತ್ತಾರೆ. ಈಗ ವಾರಸರ ಮಾಲೆಯನ್ನು ತಯಾರು ಮಾಡಬೇಕು. ಕುಮಾರಿಯರು ಮಾಡುತ್ತೀರಾ? ವಾರಸರು ಎಂದು ಯಾರನ್ನು ಕರೆಯುತ್ತಾರೆ? ವಾರಸರಾದವರ ಲಕ್ಷಣಗಳು ಯಾವ ರೀತಿ ಇರುತ್ತವೆ ಎಂಬ ಟ್ರೈನಿಂಗ್ ಕ್ಲಾಸ್ ಮೊದಲು ದಾದಿಯರಿಂದ ಪಡೆದುಕೊಳ್ಳಿ. ಅರ್ಥವಾಯಿತೆ? ಹೀಗೆ ಈ ವರ್ಷ ಒಬ್ಬರೊಬ್ಬರು ಒಬ್ಬೊಬ್ಬ ವಾರಸನನ್ನು ತಯಾರು ಮಾಡಿದರೆ ಆಗ ಬಾಪ್‌ದಾದಾ ವಾರಸರ ಮಾಲೆಯನ್ನು ತಯಾರು ಮಾಡುತ್ತಾರೆ. ಸರಿಯೇ? ಈ ವರ್ಷದಲ್ಲಿ ಯಾವುದೋ ಒಂದು ನವೀನತೆಯನ್ನು ಮಾಡುತ್ತೀರಲ್ಲವೇ?

ಮದುಬನದವರು ಎದ್ದು ನಿಲ್ಲಿರಿ, ಮದುಬನದವರು ಚತುರರಾಗಿದ್ದಾರೆ. ಮದುಬನದವರಿಗೆ ಕುಳಿತುಕೊಳ್ಳಲು ಮುಂದಿನ ಸ್ಥಾನ ಲಭಿಸುತ್ತದೆ, ಮದುಬನದವರ ಸೇವೆಯ ಚಮತ್ಕಾರವೂ ಸಹ ಎಲ್ಲರನ್ನೂ ಮಧುಬನಕ್ಕೆ ಆಕರ್ಷಿತರನ್ನಾಗಿ ಮಾಡುತ್ತದೆ. ಯಾರನ್ನು ಕೇಳಿದರೂ ಎಲ್ಲರ ಬಾಯಿಂದ ಮಧುಬನವೆಂದರೆ ಮಧುಬನವೇ ಎಂಬ ಮಾತು ಬರುತ್ತದೆ. ಸೇವೆಯಲ್ಲಿ ನಂಬರ್‌ವನ್ ಎಂದು ಹೇಳುತ್ತಾರೆ. ಈ ರೀತಿಯಾಗಿ ಇದ್ದೀರಾ? ನಂಬರ್‌ವನ್ನಾಗಿ ಇದ್ದೀರಾ ಅಥವಾ ನಂಬರ್‌ವಾರಾಗಿ ಇದ್ದೀರಾ? ನಂಬರ್‌ವನ್ನಾಗಿ ಇದ್ದಾರೆ ಬಾಪ್‌ದಾದಾ ಸದಾ ಮದುಬನ ನಿವಾಸಿಯರನ್ನು ನಂಬರ್‌ವನ್ ದೃಷ್ಟಿಯಿಂದ ನೋಡುತ್ತಾರೆ. ನಂಬರ್‌ವಾರ್ ಆಗಿ ಇರಬಾರದು. ನಂಬರ್‌ವನ್ನಾಗಿ ಇರಬೇಕು. ನಂಬರ್‌ವನ್ನಾಗಿ ಇದ್ದೀರಿ ತಾನೇ! ಯಾರೂ ದಾದಿಯರ ಹತ್ತಿರ ದೂರುಗಳನ್ನು ಹೇಳಬಾರದು. ಎಲ್ಲರೂ ಸಂಪೂರ್ಣರಾಗುತ್ತಿದ್ದಾರೆ. ಆದ್ದರಿಂದ ಯಾವ ರೀತಿಯಾದ ದೂರುಗಳೂ ಇರಬಾರದು, ಒಳ್ಳೆಯದು. ಆದಾಗಲೂ ಎಲ್ಲರೂ

ದಣಿವರಿಯದ ಸೇವಾಧಾರರು. ಎಲ್ಲರೂ ಮಧುಬನದ ಸೇವಾಧಾರರನ್ನೇ ಕೇಳುತ್ತಾರೆ. ಮಹಾಮಂಡಲೇಶ್ವರರು ಸಹ ಮಧುಬನದ ಸೇವಾದಾರರನ್ನು ನಮಗೆ ಕಳುಹಿಸಿರಿ. ಎಂದು ಹೇಳಿ ಹೋಗುತ್ತಾರೆ. ನಂಬರ್‌ವನ್  ಆಗಿದ್ದೀರಲ್ಲವೇ, ಒಳ್ಳೆಯದು. ಪಕ್ಕಾ ಆಗಿ ಕೂಡ ಇದ್ದೀರಿ, ಚೆನ್ನಾಗಿ ಕೂಡ ಇದ್ದೀರಿ, ಬಾಪ್‌ದಾದಾ ಹಾಗೆಯೇ ಹೇಳುತ್ತಾರೆ ಎಂದು ತಿಳಿಯಬೇಡಿರಿ.  ಮತ್ತು ಬಾಪ್‌ದಾದಾ ನೋಡುತ್ತಿದ್ದಾರೆ ಆಗಾಗ ಹೆಚ್ಚು ಕೆಲಸವಾದಾಗ ಹೆಚ್ಚು ಭಾರವಾಗಿಯೂ ಆಗುತ್ತಿದ್ದೀರಿ. ಆದರೆ ಅಮರವಾಗಿದ್ದೀರಿ. ಅಮರ ಭವ!ದ ವರದಾನವೂ ಲಭಿಸಿದೆ. ಅಮರರಾಗಿ ಇದ್ದೀರಾ? ಒಳ್ಳೆಯದು. ಶುಭಾಶಯಗಳು, ಶುಭಾಶಯಗಳು, ಶುಭಾಶಯಗಳು.

ಒಳ್ಳೆಯದು, ಟೀಚರ್ಸ್ ಎದ್ದು ನಿಲ್ಲಿರಿ, ಬಾಪ್‌ದಾದಾ ಟೀಚರ್ಸ್ ಅನ್ನು ಸಹ ಸದಾ ಇದೇ ದೃಷ್ಟಿಯಿಂದ ನೋಡುತ್ತಾರೆ. ಪ್ರತಿಯೊಬ್ಬ ಟೀಚರ್ ನ ಮುಖ ಚಿತ್ರದಲ್ಲಿ ಬಾಪ್‌ದಾದಾರವರು ಕಾಣಿಸಬೇಕು ಎಂದು, ಮುಖದಲ್ಲಿ ಬ್ರಹ್ಮಾ ತಂದೆಯ ಮುಖಚಿತ್ರ ಮತ್ತು ಭೃಕುಟಿಯಲ್ಲಿ ನಿರಾಕಾರ ಜ್ಯೋತಿರ್ಬಿಂದುವಿನ ರೂಪ ಕಾಣಿಸಬೇಕು. ಯಾವ ಟೀಚರ್‌ನ್ನು ನೋಡಿದರೂ ಎಲ್ಲರ ಬಾಯಿಯಿಂದಲೂ ಇವರು ತಂದೆಯ ಸಮಾನರಾದವರು ಎಂಬ ಮಾತು ಬರಬೇಕು. ಶಿವ ತಂದೆಯ ಸಮಾನರಾಗಿ ಕಾಣಿಸುತ್ತಿದ್ದಾರೆ ಎಂದು ಬರಬೇಕು. ಬ್ರಹ್ಮಾ ತಂದೆಯವರ ಸ್ಲೋಗನ್ "ನಾನು ಯಾವ ಕರ್ಮವನ್ನು ಮಾಡಿದರೆ ನನ್ನನ್ನು ನೋಡಿ ಎಲ್ಲರೂ ಅದೇ ಮಾಡುತ್ತಾರೆ" ಇದೇ ಇರುತ್ತಿತ್ತು. ಅದೇ ರೀತಿಯಾಗಿ ಪ್ರತಿಯೊಬ್ಬ ಟೀಚರ್‌ಗೆ ಇದೇ ಸ್ಲೋಗನ್ನಿನ ಸ್ಮೃತಿ ಇರಬೇಕು. ಯಾವ ಕರ್ಮ, ಯಾವ ವೃತ್ತಿ, ಯಾವ ಮಾತು, ಯಾವ ವಿಧಿಯಿಂದ ನಾವು ಮಾಡುತ್ತೇವೆಯೋ ಎಲ್ಲರೂ ಅದೇ ಮಾಡುತ್ತಾರೆ ಎಂದು. ಬ್ರಹ್ಮಾ ತಂದೆಯ ಗದ್ದೆಯು ಟೀಚರ್ಸ್ ಆದ ನಿಮಗೆ ಕುಳಿತುಕೊಳ್ಳಲು ಬಾಪ್‌ದಾದಾ ಕೊಟ್ಟಿದ್ದಾರೆ. ಮುರಳಿ ಕೇಳಿಸಲು ನಿಮಿತ್ತರಾದವರು ಟೀಚರ್ಸ್, ಆದ್ದರಿಂದ ತಂದೆಯ ಗದ್ದೆಯು ಲಭಿಸಿದೆ. ಡ್ರಮನುಸಾರ ಟೀಚರ್ಸ್ ಆದ ನಿಮಗೆ ಬಹಳ ಬಹಳ ಉನ್ನತವಾದ ಕರ್ತವ್ಯ ಲಭಿಸಿದೆ. ಬಾಪ್‌ದಾದಾ ಸಹ ಸದಾ ಟೀಚರ್ಸನ್ನು ಇದೇ ವಿಶೇಷವಾದ ಮಹತ್ವದಿಂದ ನೋಡಿದ್ದಾರೆ. ಮಹಾನಾತ್ಮರಾಗಿ, ಮಹತ್ವ ಉಳ್ಳವರಾಗಿ ಇದ್ದೀರಲ್ಲವೇ? ಯಾವಾಗಲಾದರೂ ವಿದ್ಯಾರ್ಥಿಯಿಂದ ಸರ್ಟಿಫಿಕೇಟ್ ಅನ್ನು ಪಡೆದಿದ್ದೀರಾ? ಬಾಪ್‌ದಾದಾರವರಂತೂ ನೋಡುತ್ತಾ ಇರುತ್ತಾರೆ. ಪ್ರೀತಿಯಿಂದ ಹಿಡಿದುಕೊಳ್ಳುತ್ತಾರೆ ಆದ್ದರಿಂದಲೇ ಟೀಚರ್ಸ್ ಆಗಿದ್ದಾರೆ. ತಂದೆಯಂತೂ ಪ್ರೀತಿಯಿಂದ ಹಿಡಿದಿಟ್ಟುಕೊಳ್ಳುತ್ತಾರೆ.  ಈಗ ದಾದಿಯರು ನಿಮ್ಮ ಕಿವಿ ಹಿಡಿದುಕೊಳ್ಳುತ್ತಾರೆ. ಆಗಲೂ ಧೈರ್ಯವನ್ನಿಟ್ಟು ನಿಮಿತ್ತವಾಗಿದ್ದೀರಲ್ಲವೇ? ಟೀಚರ್ಸ್ ಬಹಳ ಒಳ್ಳೆಯವರು ಎಂದು ದಾದಿ ಹೇಳುತ್ತಿದ್ದರು. ಬಹಳ ಒಳ್ಳೆಯದು. ಶುಭಾಶಯಗಳು. ಒಂದು ವೇಳೆ ಟೀಚರ್ಸ್ ಇಲ್ಲದಿದ್ದರೆ ಇಷ್ಟು ಸೇವಾಕೇಂದ್ರಗಳು ಹೇಗೆ ತೆರೆಯಲಾಗುತ್ತದೆ. ನಿಮ್ಮೆಲ್ಲರಿಗೂ ಶುಭಾಶಯಗಳು.  ಬಾಪ್‌ದಾದಾರವರಂತೂ ಬಹಳ ಬಹಳ ಶ್ರೇಷ್ಠ ದೃಷ್ಟಿಯಿಂದ ನೋಡುತ್ತಾರೆ. ಟೀಚರ್ ಸಹ ಬಹಳಷ್ಟು ಜನ ಬಂದಿದ್ದಾರೆ, ಒಳ್ಳೆಯದು. ಧೈರ್ಯ ಮತ್ತು ಶ್ರಮಕ್ಕೆ ಶುಭಾಶಯಗಳು.

ಹಾಸ್ಪೆಟಲ್ ನವರು ಉಳಿದಿದ್ದಾರೆ. ಹಾಸ್ಪೆಟಲ್ ನವರು ಸಹ ಹೊಸ ವರ್ಷದ ಉತ್ಸಾಹ ಉಲ್ಲಾಸಗಳನ್ನು ಬಹಳ ಚೆನ್ನಾಗಿ ಬರೆದಿದ್ದಾರೆ ಮತ್ತು ಬಾಪ್‌ದಾದಾರವರಿಗೆ ಸದಾ ನಿಶ್ಚಯ ಮತ್ತು ನಿಶ್ಚಿಂತತೆ ಇರುತ್ತದೆ. ಈ ಹಾಸ್ಪಿಟಲ್ಸ್ ಅನೇಕಾತ್ಮರನ್ನು ಬ್ರಾಹ್ಮಣ ಜೀವನದಲ್ಲಿಗೆ ತರುತ್ತದೆ ಎಂದು. ಬ್ರಾಹ್ಮಣರ ಸೇವೆಯನ್ನು ಸಹ ಮಾಡುತ್ತಿದ್ದಾರೆ ಮತ್ತು ಬ್ರಾಹ್ಮಣರನ್ನು ಸಹ ತಯಾರು ಮಾಡುತ್ತಿದ್ದಾರೆ. ದೊಡ್ಡ ದೊಡ್ಡ ವಿ.ಐ.ಪಿಯರು ಸಹ ಹಾಸ್ಪೆಟಲ್ನ ಹೆಸರು ಕೇಳಿ

ಪ್ರಭಾವಿತರಾಗುತ್ತಿದ್ದಾರೆ. ಈಗ ನಿಮ್ಮ ಹತ್ತಿರಕ್ಕೆ ಬರುತ್ತಾರೆ. ಚಾರ್ಟ್ ಕೂಡ ಚೆನ್ನಾಗಿ ಬರೆದಿದ್ದೀರಿ ಮತ್ತು ಪ್ರತಿಜ್ಞೆಯನ್ನು ಸಹ ಚೆನ್ನಾಗಿ ಮಾಡಿದ್ದೀರಿ. ಬಾಪ್‌ದಾದಾ ಖುಷಿ ಪಡುತ್ತಿದ್ದಾರೆ ನೀವು ಸಂಕಲ್ಪಕ್ಕೆ ನಿಮಿತ್ತವಾಗಿದ್ದೀರಿ ಆದರೆ ಎಲ್ಲರೂ ಬಹಳ ಅಭಿರುಚಿಯಿಂದ ಮಾಡಿದ್ದೀರಿ. ಒಳ್ಳೆಯದು. ನಿಮ್ಮೆಲ್ಲರ ಪ್ರತಿಜ್ಞೆಯ ಪತ್ರವನ್ನು ಓದಿ ಬಾಪ್‌ದಾದಾ ಖುಷಿ ಪಡುತ್ತಿದ್ದಾರೆ ಆದ್ದರಿಂದ ಶುಭಾಶಯಗಳು. ಈಗ ಯಾರಾದರೆ ವಿಜ್ಞಾನದ ಸಾಧನೆಗಳಿಂದ ಮುರಳಿಯನ್ನು ಕೇಳುತ್ತಿದ್ದಾರೆಯೋ ಅವರು ಸಹ ಬಾಪ್‌ದಾದಾರವರು ನಮ್ಮ ಹೆಸರನ್ನು ಹೇಳಲಿಲ್ಲ ಎಂದು ಖುಷಿಯಾಗುತ್ತಿದ್ದಾರೆ ಆದರೆ ಬಾಪ್‌ದಾದಾ ನೋಡುತ್ತಿದ್ದಾರೆ -ಯಾರು ಎಲ್ಲಿಂದ ನೋಡುತ್ತಿದ್ದರೂ, ಕೇಳುತ್ತಿದ್ದರೂ ಅವರು ಸಹ ಎದ್ದು ನಿಲ್ಲಿರಿ. ಖುಷಿಪಡುತ್ತಿದ್ದೀರಿ ಕೇಳಿ ಖುಷಿಪಟ್ಟಿದ್ದೀರಿ ಮತ್ತು ನಗುತ್ತಿದ್ದೀರಿ. ಬಾಪ್‌ದಾದಾರವರಿಗೆ ಮಕ್ಕಳೆಲ್ಲರ ಉತ್ಸಾಹ ಉಲ್ಲಾಸಗಳು ಮತ್ತು ಮನಸ್ಸಿನ ಪ್ರೀತಿ ಬಹಳ ಶ್ರೇಷ್ಠವಾಗಿ ಅನಿಸುತ್ತದೆ. ಮನಸ್ಸಿನ ಪ್ರೀತಿಯಿದ್ದರೆ ಸಮಯಕ್ಕೆ ತಲುಪುತ್ತಾರೆ. ಬಹಳ ಉತ್ಸಾಹದಿಂದ ಕೇಳುತ್ತಿದ್ದಾರೆ ಮತ್ತು ನೋಡುತ್ತಿದ್ದಾರೆ. ಕೆಲವರು ನೋಡುತ್ತಿಲ್ಲ ಆದರೆ ಕೇಳುತ್ತಿದ್ದಾರೆ. ಬಹಳಷ್ಟು ಜನರು ಕೇಳುತ್ತಿದ್ದಾರೆ. ಬಾಪ್‌ದಾದಾ ಪ್ರತಿಯೊಬ್ಬ ಮಗುವಿನ ಹೆಸರು ಹೆಸರು ಮತ್ತು ವಿಶೇಷತೆಯನ್ನನುಸರಿಸಿ ಶುಭಾಶಯಗಳನ್ನು ಕೊಡುತ್ತಿದ್ದಾರೆ. ಅವರು ಸಹ ಕೈಯನ್ನು ಎತ್ತುತ್ತಿದ್ದಾರೆ. ಮತ್ತು ಕೈಗಳನ್ನು ಅಲುಗಾಡಿಸುತ್ತಿದ್ದಾರೆ, ಒಳ್ಳೆಯದು.

ಮಕ್ಕಳೆಲ್ಲರ ಕಾರ್ಡುಗಳು ಮತ್ತು ಪತ್ರಗಳು, ಹೊಸ ವರ್ಷದ ಶುಭಾಶಯಗಳು ಬಹಳ ಬಹಳ ಬಂದಿವೆ. ಬಾಪ್‌ದಾದಾ ಹೇಳುತ್ತಿದ್ದಾರೆ ಮಕ್ಕಳೂ! ನಿಮ್ಮ ಕಾರ್ಡ್ ಗಿಂತಲೂ ಮುಂಚೆಯೇ ನಿಮ್ಮ ಹೃದಯವು ನನ್ನ ಹತ್ತಿರ ತಲುಪಿಬಿಟ್ಟಿದೆ ಎಂದು. ಬಾಪ್‌ದಾದಾ ಎಲ್ಲರ ಹೃದಯವನ್ನು ನೋಡಿ ಖುಷಿಪಡುತ್ತಿದ್ದಾರೆ. ಖರ್ಚಂತೂ ಆಗುತ್ತದೆ ಆದರೆ ಮತ್ತೆ ನಾಳೆ ಈ ಕಾರ್ಡಗಳೆಲ್ಲವೂ ಸ್ಮೃತಿ ಚಿಹ್ನೆಯ ರೂಪದಲ್ಲಿ ಉಳಿದುಕೊಂಡು ಬಿಡುತ್ತವೆ. ಆದರೆ ಬಾಪ್‌ದಾದಾ ಈ ವಿಷಯಕ್ಕೆ ಖುಷಿ ಪಡುತ್ತಿದ್ದಾರೆ. ಖರ್ಚನ್ನು ನೋಡುತ್ತಿಲ್ಲ, ಮಕ್ಕಳ ಮನಸ್ಸಿನ ಧ್ವನಿ ಏನು ಎಂಬುದನ್ನು ಬಾಪ್‌ದಾದಾ ನೋಡುತ್ತಿದ್ದಾರೆ. ಮನಸ್ಸಿನಲ್ಲಿರುವ ಪ್ರೀತಿ ಕೈಗಳಿಂದ ಕಾರ್ಡಿನ ಮೇಲೆ ಬಂದುಬಿಟ್ಟಿದೆ. ಆದ್ದರಿಂದಲೇ ಒಬ್ಬರಿಗಿಂತಲೂ ಒಬ್ಬರು ಒಳ್ಳೆಯ ಕಾಡುಗಳನ್ನು ತಯಾರು ಮಾಡಿದ್ದಾರೆ. ಕಾರ್ಡುಗಳು ಇಲ್ಲಿ ಇವೆಲ್ಲವೇ, ನೀವೂ ನೋಡಿರಿ ಒಳ್ಳೆಯದು.

**ವಿಶ್ವದ ನಾಲ್ಕೂ ಕಡೆಯ ಸರ್ವ ಸಫಲತಾಮೂರ್ತಿ ಮಕ್ಕಳಿಗೆ, ಸರ್ವವನ್ನು ಸಫಲ ಮಾಡಿಕೊಳ್ಳುವ ತೀವ್ರ ಪುರುಷಾರ್ಥಿ ಮಕ್ಕಳಿಗೆ, ಸದಾ ತಮ್ಮ ಖಾತೆಯನ್ನು ಪರಿಶೀಲನೆ ಮಾಡಿಕೊಳ್ಳುವ ಲೆಕ್ಕ ಪರಿಶೋಧಕರು ಹಾಗೂ ಭವಿಷ್ಯದ ರಚನೆಕಾರರು, ಇಂತಹ ಶ್ರೇಷ್ಠ ಆತ್ಮರಿಗೆ ಸದಾ ತಮ್ಮ ಪ್ರತಿಯೊಂದು ಹೆಜ್ಜೆಯಲ್ಲಿ ತಂದೆಯನ್ನು ಪ್ರತ್ಯಕ್ಷ ಮಾಡುವವರು, ಗ್ರೇಟ್, ಗ್ರೇಟ್ ಗ್ರಾಂಡ್ಫಾದರಿನ ಸರ್ವ ಗ್ರಾಂಡ್ ಸನ್ಸ್ಗೆ ಬಾಪ್‌ದಾದಾರವರ ಬಹಳ...ಬಹಳ...ಬಹಳ...ಬಹಳ... ನೆನಪು, ಪ್ರೀತಿ, ಶುಭಾಷಯಗಳು ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 31-12-2001.

***ಈ ಹೊಸ ವರ್ಷದಲ್ಲಿ ಸಫಲತಾ ಭವದ ವರದಾನದ ಮೂಲಕ ತಂದೆ ಮತ್ತು ಸ್ವಯಂನ ಪ್ರತ್ಯಕ್ಷತೆಯನ್ನು ಸಮೀಪ ತೆಗೆದುಕೊಂಡು ಬನ್ನಿ***

ಶುಭಭಾವನೆಯ ಶುಭಾಶಯಗಳು ಎಷ್ಟು ಶ್ರೇಷ್ಠವಾದವು ಎಂದರೆ ಯಾವುದೇ ಆತ್ಮನ ಎಂತಹದ್ದೇ ಭಾವನೆ ಇದ್ದರೂ ಭಾವನೆಯು ಒಳ್ಳೆಯದಾಗಿ ಇಲ್ಲದಿದ್ದರೂ ನಿಮ್ಮ ಶುಭ ಭಾವನೆಯು ಅವರ ಭಾವವನ್ನು ಸಹ ಪರಿವರ್ತನೆ ಮಾಡಬಲ್ಲದು. ಸ್ವಭಾವವನ್ನು ಸಹ ಪರಿವರ್ತನೆ ಮಾಡಲು ಸಾಧ್ಯವಿದೆ. ಪ್ರತಿಯೊಂದು ಸಮಯ, ಪ್ರತಿಯೊಂದು ಆತ್ಮನಿಗೆ ಇದೇ ಅವಿನಾಶಿ ಶುಭಾಶಯಗಳನ್ನು ಕೊಡಿ. ಯಾರು ನಿಮಗೆ ಏನನ್ನು ಕೊಟ್ಟರೂ ನೀವು ಎಲ್ಲರಿಗೂ ಶುಭ ಭಾವನೆಯನ್ನು ಕೊಡಿ. ಅವಿನಾಶಿ ಆತ್ಮನ, ಅವಿನಾಶಿ ಆತ್ಮಿಕ ಸ್ಥಿತಿಯಲ್ಲಿ ಸ್ಥಿತವಾಗುವುದರಿಂದ ಪರಿವರ್ತನೆ ಆಗಿಬಿಡುತ್ತದೆ.. ಸರ್ವ ಖಜಾನೆಗಳನ್ನು ಜಮಾ ಮಾಡಿಕೊಳ್ಳುವ ಸಮಯ ಕೇವಲ ಸಂಗಮಯುಗವೇ ಆಗಿದೆ. ಈ ಚಿಕ್ಕಯುಗದಲ್ಲಿ ಎಷ್ಟು ಜಮಾ ಮಾಡಿಕೊಳ್ಳುತ್ತಿರೋ ಅದನ್ನನುಸರಿಸಿ ಇಡೀ ಕಲ್ಪದ ಪ್ರಾಲಬ್ಧವನ್ನು ಪ್ರಾಪ್ತಿ ಮಾಡಿಕೊಳ್ಳುತ್ತೀರಿ. ಈ ಬ್ರಾಹ್ಮಣ ಜೀವನದಲ್ಲಿ ಶ್ರೇಷ್ಠತೆಗೆ ಆಧಾರವಾದ ಎಲ್ಲದಕ್ಕಿಂತಲೂ ದೊಡ್ಡ ಖಜಾನೆ, ಸಂಕಲ್ಪ, ಸಮಯ, ಶಕ್ತಿ, ಜ್ಞಾನ ಎಂದು ತಿಳಿಸುತ್ತಾ ಬಾಪ್‌ದಾದಾ ಮಾಸ್ಟರ್ ರಚಯಿತರಾದ ಮಕ್ಕಳೊಂದಿಗೆ ಮಾತನಾಡಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಜ್ಞಾನಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ನವಯುಗಕ್ಕೆ ಮಾಸ್ಟರ್ ರಚಯಿತನು.

2. ನಾನು ಆತ್ಮಿಕ ಸ್ಥಿತಿಯಲ್ಲಿದ್ದು ಪ್ರತಿಯೊಂದು ಸಮಯ ಪ್ರತಿಯೊಂದು ಆತ್ಮನಿಗೆ ಸತ್ಯವಾದ ಹೃದಯದಿಂದ ಶುಭಭಾವನೆ, ಶುಭಕಾಮನೆಯ ಶುಭಾಶಯಗಳನ್ನು ಕೊಡುತ್ತಿದ್ದೇನೆ.

3. ನಾನು ಹೊಸ ವರ್ಷವನ್ನು ಆಚರಿಸಿಕೊಳ್ಳುವುದರೊಂದಿಗೆ ನವೀನತೆಯ ಪ್ರೋಗ್ರಾಮನ್ನು ತಯಾರು ಮಾಡಿಕೊಂಡಿದ್ದೇನೆ.

4. ನಾನು ಸಂಗಮಯುಗದಲ್ಲಿ ಸರ್ವ ಖಜಾನೆಗಳ ಉಳಿತಾಯದ ಖಾತೆ ಅಥವಾ ಜಮಾ ಖಾತೆಯನ್ನು ಹೆಚ್ಚಿಸಿಕೊಂಡು ಇಡೀ ಕಲ್ಪದ ಪ್ರಾಲಬ್ಧವನ್ನು ತಯಾರು ಮಾಡಿಕೊಂಡಿದ್ದೇನೆ.

5. ಈಗಿಲ್ಲದಿದ್ದರೆ ಇನ್ನೆಂದಿಗೂ ಇಲ್ಲ ಎಂಬ ಸ್ಲೋಗನ್ ಸದಾ ನನ್ನ ಬುದ್ಧಿಯಲ್ಲಿ, ಮನಸ್ಸಿನಲ್ಲಿ ಇದೆ.

6. ನಾನು ಶ್ರೇಷ್ಠ ಸಂಕಲ್ಪ ಅಥವಾ ಶುಭ ಸಂಕಲ್ಪದಿಂದ ಸ್ವಯಂನ್ನು ಅಥವಾ ಸೇವೆಯನ್ನು ಶ್ರೇಷ್ಠವಾಗಿ ಮಾಡುತ್ತಾ ಇತರಾತ್ಮರಿಗೆ ಸಹಯೋಗವನ್ನು ಕೊಡುತ್ತಿದ್ದೇನೆ.

7. ನಾನು ಸರ್ವಖಜಾನೆಗಳ ಉಳಿತಾಯದ ಸ್ಕೀಮ್(ಯೋಜನೆ)ಅನ್ನು ತಯಾರು ಮಾಡಿ ಜಮಖಾತೆಯನ್ನು ಹೆಚ್ಚಿಸಿಕೊಂಡು ಅಂತರ್ಮುಖತೆಯ ಭಟ್ಟಿಯಲ್ಲಿ ಇದ್ದೇನೆ.

8. ನಾನು ಸಫಲತಾ ಭವ ಎಂಬ ವರದಾನದಿಂದ ಪ್ರತಿಯೊಂದು ಖಜಾನೆಯನ್ನು ಸಫಲ ಮಾಡಿ ತಂದೆಯ, ಸಮಯದ ಪ್ರತ್ಯಕ್ಷತೆಯನ್ನು ಸಮೀಪವಾಗಿ ತಂದಿದ್ದೇನೆ.

9. ನಾನು ಸರ್ವಖಜಾನೆಗಳನ್ನು ಎಷ್ಟರವರೆಗೆ ಜಮಾ ಮಾಡಿಕೊಂಡಿದ್ದೇನೆ ಎಂದು ನನ್ನ ಜಮಾದ ಖಾತೆಯನ್ನು, ಲೆಕ್ಕಾಚಾರವನ್ನು ಇಡೀ ದಿನದಲ್ಲಿ ಮಧ್ಯ ಮಧ್ಯದಲ್ಲಿ ಪರಿಶೀಲಿಸಿಕೊಳ್ಳುತ್ತಿದ್ದೇನೆ.

10. ನಾನು ಎವರ್ರೆಡಿಯಾಗಿ ಇದ್ದೇನೆ.

11. ನನ್ನ ಮುಖದಲ್ಲಿ ಆತ್ಮೀಯತೆ, ನುಡಿಯಲ್ಲಿ ಮಧುರತೆ ಮತ್ತು ಮನಸ್ಸು, ಬುದ್ಧಿಯಲ್ಲಿ ಸದಾ ಶುಭ ಭಾವನೆ, ದಯಾ ಹೃದಯ ಭಾವನೆ, ದಾತ ಸ್ಥಿತಿಯು ಕಾಣಿಸುತ್ತಿದೆ.

12. ನಾನು ಸೋಮಾರಿತನ, ಮನಸ್ಸನ್ನು ಬಲಹೀನ ಮಾಡಿಕೊಳ್ಳುವುದನ್ನು ಸಮಾಪ್ತಿ ಮಾಡಿ ವಿಶಾಲ ಹೃದಯ ಉಳ್ಳವನಾಗಿ ಉತ್ಸಾಹ ಉಲ್ಲಾಸಗಳೊಂದಿಗೆ ಹಾರುತ್ತಾ ಇದ್ದೇನೆ.

13. ನಾನು ಹಿಂದೆ ಬಂದರೂ ಮುಂದಕ್ಕೆ ಹೋಗುವ ತೀವ್ರ ಪುರುಷಾರ್ಥಿ.

14. ನಾನು ವಿಜಯೀ, ವಿಜಯವು ನನ್ನ ಜನ್ಮ ಸಿದ್ಧ ಅಧಿಕಾರ.

15. ನಾನು ದಣಿವರಿಯದ ಸೇವಾಧಾರಿ.

16. ನಾನು ಯಾವಕರ್ಮ, ಯಾವ ವೃತ್ತಿ, ಯಾವ ಮಾತು ಯಾವ ವಿಧಿಯಿಂದ ಮಾಡುತ್ತೇನೆಯೋ ಎಲ್ಲರೂ ಅದನ್ನೇ ಮಾಡುತ್ತಾರೆ ಎಂಬ ಸ್ಲೋಗನನ್ನು ಸದಾ ಸ್ಮೃತಿಯಲ್ಲಿಟ್ಟುಕೊಂಡಿದ್ದೇನೆ. (ನಾನು ಯಾವ ಕರ್ಮವನ್ನು ಮಾಡುತ್ತೇನೆಯೋ ಅದನ್ನು ನೋಡಿ ಎಲ್ಲರೂ ಅದೇ ಮಾಡುತ್ತಾರೆ.)